

ಆಗಲೇ ಹೋಗಿ ಗಾರ್ಡನ್‌ಗೆ ಹೊಡೆಯಲೆಂದು ತಂದಿಟ್ಟಿದ್ದ ವಿಷದ ಬಾಟಲಿಯನ್ನು ಎತ್ತಿ ಬಾಯಿಗೆ ಸುರಿದುಕೊಂಡೇಬಿಟ್ಟಿದ್ದಳು! ಅವಳ ರೌದ್ರಾವತಾರವನ್ನು ಕಂಡು ಅಪ್ಪ ದಂಗಾಗಿ ಹೋದರು.

ಪ್ರತಿದಿನ ಅಪ್ಪ ಕಾಲೇಜಿನಿಂದ ಬರುವ ಮೊದಲೇ ನನ್ನನ್ನು ಎತ್ತಿಕಟ್ಟಿ, 'ಗಂಡು ನೋಡಿದಿರಾ ಅಪ್ಪ...' ಎಂದು ನನ್ನ ಬಾಯಿಂದಲೇ ಕೇಳಿಸುತ್ತಿದ್ದಳು, ಇಲ್ಲದಿದ್ದರೆ ಅವರು ತಲೆ ಕೆಡಿಸಿಕೊಳ್ಳುವುದಿಲ್ಲವೆಂದು. ಅಪ್ಪ, 'ನೂರಾರು ಮಕ್ಕಳಿಗೆ ಸೈಕಾಲಜಿ ಪಾಠ ಹೇಳಿಕೊಡುತ್ತೀನಿ. ಆದರೆ ನಿಮ್ಮ ಸೈಕಾಲಜಿಯೇ ಅರ್ಥವಾಗುತ್ತಿಲ್ಲ...' ಎಂದು ಅಲವತ್ತುಕೊಳ್ಳುತ್ತಿದ್ದರು. ಅವರು ಸ್ವತಃ ಏನನ್ನೂ ಮಾಡುವಂತೆಯೇ ಇರಲಿಲ್ಲ, ಎಲ್ಲ ಅಮ್ಮ ಹೇಳಿದಂತೆಯೇ ನಡೆದುಕೊಳ್ಳಬೇಕಿತ್ತು ಪಾಪ. ಆಗೆಲ್ಲ ಅಪ್ಪ ಹೇಳುತ್ತಿದ್ದುದು ಒಂದೇ ಮಾತು, 'ಇಡೀ ಪ್ರಪಂಚವನ್ನು ಬದಲಾಯಿಸಿಬಿಡಬಹುದು, ಆದರೆ ಹೆಂಡತಿಯನ್ನು ಬದಲಾಯಿಸಲು ಯಾರ ಕೈಯಿಂದಲೂ ಸಾಧ್ಯವಿಲ್ಲ'ವೆಂದು.

ಹೆಣ್ಣು ನೋಡಲು ಬಂದಾಗ ಅವನ ಚಿಕ್ಕಪ್ಪನೂ ತನ್ನ ದತ್ತುಪುತ್ರನೆಂದು ಪರಿಚಯಿಸಿದ್ದ. ಹೇಳಿಕೊಳ್ಳುವಂಥ ಆಸ್ತಿಯಿಲ್ಲದಿದ್ದರೂ, ಮಹತ್ವಾಕಾಂಕ್ಷೆಯಿಲ್ಲದೇ ಪುಟ್ಟದೊಂದು ಗೂಡಿನಲ್ಲಿ ಸುಖವಾಗಿರಬಹುದೆಂದು ನಾನಾದರೂ ಭಾವಿಸಿದ್ದೆ. ನಾವು ಹೆಣ್ಣುಮಕ್ಕಳದ್ದು ಇದೇ ಸಮಸ್ಯೆ, ನಮ್ಮ ಸುತ್ತಳತೆಯ ದೂರದಲ್ಲಿದ್ದನ್ನೆಲ್ಲ ಸತ್ಯವೆಂದು ನಂಬಿಬಿಡುತ್ತೇವೆ. ಅಪ್ಪ ಹೇಳುತ್ತಿರುತ್ತಾರೆ, ಹೆಣ್ಣುಮಕ್ಕಳ ಕಣ್ಣಿನ ಕರಿಗುಡ್ಡೆ ಚಿಕ್ಕದಿದ್ದು, ಬಿಳೀ ಭಾಗ ಜಾಸ್ತಿ ಇರುತ್ತದಂತೆ. ಅದಕ್ಕೇ ಹೆಂಗಸರಿಗೆ ದೃಷ್ಟಿಯ ಕೋನ ಹೆಚ್ಚಾಗಿರುತ್ತದಂತೆ. ಎಂದೇ ರಾಗಿಕಾಳಿನ ಮಧ್ಯೆ ಅಡಗಿರುವ ಸಣ್ಣ ಹುಳುಕೂ ನಮ್ಮ ಕಣ್ಣಿಗೆ ಬಿದ್ದುಬಿಡುತ್ತದೆ. ಅದೇ ಗಂಡಸರಿಗೆ ಇದು ಸಾಧ್ಯವಿಲ್ಲ. ಎಂದೇ ನಮಗೆ ಗಂಡಸರಂತೆ ದೂರದ ದೃಷ್ಟಿ ನಿಖರವಾಗಿರುವುದಿಲ್ಲವಂತೆ, ಅದಕ್ಕೇ ನಾವು ಕೆಟ್ಟ ಡ್ರೈವರುಗಳಂತೆ! ಇದನ್ನು ನಾನು ಯಾವಾಗಲೂ ಆಕ್ಷೇಪಿಸುತ್ತಿದ್ದೆ, ನಿನಗಿಂತಲೂ ಚೆನ್ನಾಗಿ ನಾನು ಕಾರನ್ನು ಓಡಿಸಬಲ್ಲೆನೆಂದು ಸವಾಲು ಹಾಕುತ್ತಿದ್ದೆ. ಅದನ್ನು ಅವರೂ ಒಪ್ಪಿಕೊಳ್ಳುತ್ತಿದ್ದರು. 'ನೀನು ಗಂಡುಮಗನಾಗಿ ಹುಟ್ಟಿಬಿಡಬೇಕಿತ್ತು ಮಗಳೇ...' ಎನ್ನುತ್ತಿದ್ದರು. ಹಾಗೇ ಬೆಳೆಸಿದ್ದರು ಕೂಡ.

ಅವನ ಹುಳುಕನ್ನು ನಾನು ಕಂಡುಹಿಡಿದಿದ್ದೇ ಅವನು ನನ್ನನ್ನು ದ್ವೇಷಿಸಲು ಕಾರಣವಾಗಿರಬೇಕು. ಅವನಿಗೆ ಸಿಕ್ಕಾಪಟ್ಟೆ ಕೀಳರಿಮೆಯಿತ್ತು. ನಾನು ಅವನಿಗಿಂತಲೂ ಮುಂದೆ ನಡೆಯುವುದನ್ನು ಸಹಿಸದೇ, ಮಕ್ಕಳಂತೆ ಓಡಿಬಂದು ನನಗಿಂತ ಮುಂದೆ ಮುಂದೆ ಹೋಗಲು ಪ್ರಯತ್ನಿಸುತ್ತಿದ್ದ. ನನ್ನ ಗತ್ತಿನ ನಡಿಗೆ ಅವನಲ್ಲಿ ಅಸೂಯೆಯನ್ನು ಸೃಷ್ಟಿಸುತ್ತಿತ್ತು. ಅಕ್ಕಪಕ್ಕ ಕೂತಾಗಲೂ ಅಷ್ಟೇ, ನಾನು ಅವನಿಗಿಂತಲೂ ಸ್ವಲ್ಪ ಎತ್ತರದಲ್ಲಿ ಕೂರುವುದನ್ನೂ ಸಹಿಸುತ್ತಿರಲಿಲ್ಲ. ಅದಿರಲಿ, ಎಂಗೇಜ್‌ಮೆಂಟ್ ಫೋಟೊಗಳಲ್ಲಿ ನಾನು ಚೆನ್ನಾಗಿರುವ ಎಲ್ಲ ಫೋಟೊಗಳನ್ನು ಡಿಲೀಟ್ ಮಾಡಿಸಿ, ಅವನು ಚೆನ್ನಾಗಿ ಕಾಣುವ ಫೋಟೊಗಳನ್ನು ಮಾತ್ರ ಪ್ರಿಂಟ್ ಹಾಕಿಸಲು ಹೇಳುತ್ತಿದ್ದ. ಮದುವೆಯಾದ ಕೆಲವೇ ದಿನಗಳಲ್ಲಿ ಇದಕ್ಕೆ ಕಾರಣವನ್ನು ಕಂಡುಹಿಡಿದುಬಿಟ್ಟೆ. ಅವನ ಹಿಂದಿನ ಕಾಣದ ಆ ಕೈಯನ್ನು ಒಂದು ದಿನ ರೆಡ್‌ಹ್ಯಾಂಡಾಗಿ ಹಿಡಿದುಬಿಟ್ಟೆ. ಅದು ಅವನ ಅತ್ತೆಯ ಮಗಳು!

ಆಕೆಗೂ ಮದುವೆಯಾಗಿ ಒಬ್ಬ ಮಗನಿದ್ದ. ವಾಸ್ತವವಾಗಿ ಅವಳ ಮನೆಯಲ್ಲೇ ಅವನು ವಾಸವಾಗಿದ್ದರೂ, ಸಮಾಜದಲ್ಲಿ ಅವರಿಗೊಂದು ಘನತೆಯೆಂಬುದಿಲ್ಲದೇ ಮದುವೆಯಾಗುವವರೆಗೆ ಉನ್ನತ ಅಧಿಕಾರಿಯಾಗಿದ್ದ ಅವನ ಚಿಕ್ಕಪ್ಪನ ನೆರಳಿನಲ್ಲಿ ಬದುಕಿದವನಂತೆ ನಾಟಕವಾಡಿದ್ದರು. ಅವರ ಮನೆಯನ್ನೇ ತೋರಿಸಿ, ಮಂಕುಬೂದಿ ಎರಚಿ ನನ್ನನ್ನು ಮದುವೆ ಮಾಡಿಕೊಂಡಿದ್ದರು. ಮೊದಲೇ ಅವನ ಅತ್ತೆಯ ಮಗಳ ಮನೆಯಲ್ಲಿ ವಾಸವಿರುವುದಾಗಿ ಹೇಳಿದ್ದರೆ, ನಮ್ಮಮ್ಮ ಅವನಿಗೆ ಹೆಣ್ಣನ್ನೇ ಕೊಡುತ್ತಿರಲಿಲ್ಲವೇನೋ. ಆದರೆ ಅಪ್ಪ ಉದಾರಿ, ತಂದೆ–ತಾಯಿ ಮಾಡಿದ ತಪ್ಪಿಗೆ ಮಗನಿಗೇಕೆ ಶಿಕ್ಷೆ ಕೊಡಬೇಕೆಂದು ಅವನ ಪರ ವಹಿಸಿದ್ದರು. ಆದರೆ ಅನಾಥನೆಂದು ಕೈನೀಡಿ ಮೇಲೆತ್ತಲು ಹೋದರೆ ನಮ್ಮನ್ನೇ ಕೊಚ್ಚೆಮೋರಿಗೆ ಬೀಳಿಸಿ, ಅನಾಥರನ್ನಾಗಿಸಿಬಿಟ್ಟನಲ್ಲ!

ಮದುವೆಯಾದ ನಂತರದ ಮೊದಲನೇ ಮುಟ್ಟು ಬಿಟ್ಟು ಎರಡನೆಯ ಮುಟ್ಟು ಆಗಲೇಯಿಲ್ಲ. ವಾರವಾಯಿತು, ಹತ್ತು ದಿನವಾಯಿತು... ಗಂಡನಿಗೆ ಹೇಳಿದೆ. ಬಹಳ ಖುಷಿಪಟ್ಟ. ಎತ್ತಿಕೊಂಡು ಮುದ್ದಾಡಿದ. ಸಂಜೆ ಆಫೀಸಿನಿಂದ ಬರುವಾಗ ವೆಂಕಟಲಕ್ಷ್ಮಿಯ ಮನೆಗೆ ಹೋಗಿಬಂದವನು, 'ಈಗಲೇ ನಮಗೆ ಮಗು ಬೇಡ, ತೆಗೆಸಿಬಿಡೋಣ' ಎಂದ. ಯಾಕೆ ಎಂದೆ. ಆಕೆ ಹೇಳಿದ್ದಾಳೆ ಎಂದ. ಅಂದರೆ ನಮ್ಮ ಜೀವನವನ್ನು ಅವಳು ನಿಯಂತ್ರಿಸುತ್ತಿದ್ದಾಳೆ. ನಾನೂ ಸೆಟೆದುನಿಂತೆ, 'ಅವಳ್ಯಾರು ಹೇಳುವುದಕ್ಕೆ?' ಎಂದೆ. ಇದ್ದಕ್ಕಿದ್ದಂತೆ, 'ನಿನ್ನನ್ನು ಬೇಕಾದರೆ ಬಿಡುತ್ತೇನೆ, ಅವಳನ್ನು ಬಿಡುವುದಿಲ್ಲ' ಎಂದುಬಿಟ್ಟ!

ಮದುವೆಯಾಗಿ ಎರಡು ತಿಂಗಳಾಗಿಲ್ಲ, ಆಗಲೇ ಇಂಥ ಮಾತೇ? ಹೌದು, ನಾನೂ ಸ್ವಾಭಿಮಾನಿ. ಮುನಿಸಿಕೊಂಡು ಹೋಗಿ ಪಕ್ಕದ ರೂಮಿನ ಬಾಗಿಲು